# ಉಕ್ರೇನಿನ ಪ್ರೇಮ ಸುರಂಗ!





ಪ್ರೇಮ ಎಂಬುದು ವಿಶ್ವವ್ಯಾಪಿ. ಅದಕ್ಕೆ ಕಾಲ-ದೇಶಗಳ ಸೀಮೆ ಇಲ್ಲ. ಗಾಢ ಪ್ರೇಮಿಗಳ ಅದಮ್ಯ ಪ್ರೇಮದ ನೂರೆಂಟು ಕಥೆಗಳು ಎಲ್ಲ ಕಾಲ, ದೇಶಗಳಲ್ಲೂ ಕಾಣಸಿಗುತ್ತವೆ. ಮೊಗಲ್ ದೊರೆ ಶಹಜಹಾನ್ ಹಾಗೂ ಆತನ ರಾಣಿ ಮಮತಾಜ್ ಬೇಗಮ್ ನಡುವಣ ಅದಮ್ಯ ಪ್ರೇಮದ ಸಂಕೇತವಾಗಿ ನಮ್ಮ ತಾಜ್‌ಮಹಲ್ ಇವತ್ತಿಗೂ ವಿಶ್ವಾದ್ಯಂತ ಪ್ರೇಮಿಗಳನ್ನು ಆಕರ್ಷಿಸುತ್ತಿದೆ. ಹಾಗೆಯೇ ಜಗತ್ತಿನ ಕೆಲವು ನಗರಗಳು ಪ್ರೇಮಿಗಳನ್ನು ಅಯಸ್ಕಾಂತದಂತೆ ಸೆಳೆಯುವುದಿದೆ. ಫ್ರಾನ್ಸ್‌ನ ಪ್ಯಾರಿಸ್ ಅಥವಾ ವೆನಿಸ್ ನಗರಗಳಿಗೆ ಮಧುಚಂದ್ರ ಪ್ರವಾಸ ಹೊರಡುವ ಲಕ್ಷಾಂತರ ಪ್ರೇಮಿಗಳು ವಿಶ್ವಾದ್ಯಂತ ಇದ್ದಾರೆ.

ಯೂರೋಪಿನ ಉಕ್ರೇನ್ ದೇಶದಲ್ಲಿ ಇಂತಹ ಒಂದು ತಾಣ ಇದೀಗ ಪ್ರವರ್ಧಮಾನಕ್ಕೆ ಬಂದಿದೆ. ಅದು ಮೂರು ಕಿ.ಮೀ. ಉದ್ದದ ಖಾಸಗಿ ರೈಲು ಸಂಚಾರದ ಸುರಂಗ ಮಾರ್ಗ! ಈ ರೈಲು ಮಾರ್ಗವನ್ನು 'ದಿ ಲವರ್ಸ್ ರೈಲ್ವೇ ಟನೆಲ್' ಎಂದೇ ಕರೆಯುತ್ತಾರೆ.

ಹಲವಾರು ವರ್ಷಗಳ ಹಿಂದೆ ನಿರ್ಮಾಣವಾದ ಈ ರೈಲು ಮಾರ್ಗ ಇರುವುದು ಪಶ್ಚಿಮ ಉಕ್ರೇನಿನ ಕ್ಲೆವಾನ್ ಪಟ್ಟಣದಲ್ಲಿ. ಸುಮಾರು 8-9 ಸಾವಿರ ಜನಸಂಖ್ಯೆ ಇರುವ ಕ್ಲೆವಾನ್, ಉಕ್ರೇನ್‌ನ ರಾಜಧಾನಿ ಕೀವ್‌ನಿಂದ ಸುಮಾರು 350 ಕಿ.ಮೀ ದೂರದಲ್ಲಿದೆ ಈ ತಾಣ. ಹತ್ತಿರದ ಪಟ್ಟಣವೆಂದರೆ (28 ಕಿ.ಮೀ) ರಿವ್ನ್. ಪೋಲಂಡ್‌ನ ಗಡಿಗೆ ಸಮೀಪವಿರುವ ಲಶ್ಕ್ ಪಟ್ಟಣದಿಂದ 50 ಕಿ.ಮೀ ದೂರವಿದೆ. ಉಕ್ರೇನಿನ ಖಾಸಗಿ ಕಂಪೆನಿಯೊಂದು ಈ ಮಾರ್ಗದಲ್ಲಿ ಗೂಡ್ಸ್ ರೈಲನ್ನು ಓಡಿಸುತ್ತದೆ. ಕ್ಲೆವಾನ್ ಪಟ್ಟಣದ ಹೊರವಲಯದ ಫೈಬರ್ ಬೋರ್ಡ್ ಕಾರ್ಖಾನೆಗೆ ಕಟ್ಟಿಗೆ ಸಾಗಿಸುವುದು ಈ ರೈಲಿನ ಕೆಲಸ.

ಈ ರೈಲು ಮಾರ್ಗದ ಮೂರು ಕಿ.ಮೀ ಉದ್ದಕ್ಕೂ ದಟ್ಟ ಮರಗಳ ಹಚ್ಚ ಹಸಿರು ಹೊದ್ದು ನಿಂತಿದೆ. ಸುರಂಗದಂತೆ ಗಿಡಮರಗಳು ಬೆಳೆದು ಎಷ್ಟು ದಟ್ಟವಾಗಿ ಹಸಿರಿನ ಹೊದಿಕೆ ಇದೆಯೆಂದರೆ, ಅಕ್ಕಪಕ್ಕದಿಂದ ಸೂರ್ಯನ ಬೆಳಕು ಕೂಡಾ ರೈಲು ಹಳಿಯ ಮೇಲೆ ಬೀಳುವುದಿಲ್ಲ. ಅದರಲ್ಲೂ ವಸಂತ ಋತುವಿನಲ್ಲಿ ಹಚ್ಚ ಹಸಿರು ಹೊದ್ದು ಸ್ವರ್ಗದಂತೆ ಕಂಗೊಳಿಸುವ ಈ ರೈಲು ಮಾರ್ಗದಲ್ಲಿ ಪ್ರೇಮಿಗಳು ದೊಡ್ಡ ಸಂಖ್ಯೆಯಲ್ಲಿ ಓಡಾಡುತ್ತಾರೆ.

ಆರಂಭದಲ್ಲಿ ಇದು ಸ್ಥಳೀಯರಿಗೆ ಮಾತ್ರ ಆಕರ್ಷಣೆಯ ತಾಣ ಎನ್ನಿಸಿತ್ತು. ಆದರೆ ಇಂಟರ್‌ನೆಟ್‌ನಲ್ಲಿ ಈ ಸುಂದರ ತಾಣದ ಫೋಟೋಗಳು ಕಾಣಿಸಿಕೊಂಡ ಬಳಿಕ, ಕಳೆದ ಕೆಲವು ವರ್ಷಗಳಿಂದ ಉಕ್ರೇನ್‌ಗೆ ಬರುವ ಪ್ರವಾಸಿಗರೂ ಈ ತಾಣವನ್ನು ಹುಡುಕಿಕೊಂಡು ಬರುತ್ತಿದ್ದಾರೆ. ಬ್ರಿಟನ್ನಿನ 'ಡೈಲಿ ಮೇಲ್'ನಲ್ಲಿ ಮೊದಲು ಬಂದ ಲೇಖನವೊಂದು ಈ ತಾಣದ ಬಗ್ಗೆ ಬೆಳಕು ಚೆಲ್ಲಿತು.

ಖಾಸಗಿ ಕಂಪೆನಿಯ ಗೂಡ್ಸ್ ರೈಲು ಈ ರಸ್ತೆಯಲ್ಲಿ ದಿನಕ್ಕೆ ಮೂರು ಬಾರಿ ಮಾತ್ರ ಓಡಾಡುತ್ತದೆ. ಹಾಗಾಗಿ ಉಳಿದೆಲ್ಲ ಸಮಯ ಪ್ರೇಮಿಗಳು ನಿರಾತಂಕವಾಗಿ ಈ ಹಸಿರು ಸುರಂಗದಲ್ಲಿ ಕೈ ಕೈ ಹಿಡಿದು ಓಡಾಡಬಹುದು.

ಇಲ್ಲಿಗೆ ಬರುವ ಪ್ರೇಮಿಗಳಲ್ಲಿ ಒಂದು ನಂಬಿಕೆಯೂ ಹರಡಿದೆ. 'ನಿಜಕ್ಕೂ ನಿಮ್ಮ ಪ್ರೇಮ ಪ್ರಾಮಾಣಿಕವಾಗಿದ್ದಲ್ಲಿ, ಈ ರೈಲು ಮಾರ್ಗದಲ್ಲಿ ನಡೆಯುವಾಗ ಮನಸ್ಸಿನಲ್ಲಿ ಅಂದುಕೊಂಡದ್ದು ನಿಜವಾಗುತ್ತದೆ' ಎನ್ನುವುದೇ ಆ ನಂಬಿಕೆ. ಇದರಿಂದಾಗಿ ಇದೀಗ ಪ್ರೇಮಿಗಳ ಸ್ವರ್ಗವಾಗಿಯೂ ಪರಿಣಮಿಸಿದೆ.

ಅಂತರ್ಜಾಲ ಚಿತ್ರ ಮಾಹಿತಿ:
**ಸುಭಾಸ ಯಾದವಾಡ.**